ಕಳೆದ ಮೂರು ವರ್ಷಗಳಲ್ಲಿ ಬಂಧಿತರಾದ ಕಾಡುಗಳ್ಳರ ಸಂಖ್ಯೆ ಹಾಗೂ ಅವರುಗಳಿಂದ ವಶಪಡಿಸಿಕೊಂಡಿರುವ ಅರಣ್ಯ ಸ್ವತ್ತಿನ (ಸಂಪತ್ತಿನ) ಮೊತ್ತಗಳ ವಿವರಗಳು

ಕ್ರ.ಸಂ.	ವೃತ್ತ	ಸಂಖ್ಯೆ	ಮೊತ್ತ
೧.	ಹಾಸನ	15	8,68,848.00
2.	ಕೊಡಗು	3632	2,46,76,791.00
3.	ಗುಲ್ಬರ್ಗಾ	30	13,400.00
4.	ಬಳ್ಳಾರಿ	377	3,88,409.00
5.	ಕೆನರಾ	951	2,31,25,000.00
6.	ಮೈಸೂರು	139	16,59,821.00
7.	ಬೆಂಗಳೂರು	211	63,93,476.00
8.	ಶಿವಮೊಗ್ಗ	4724	5,06,74,792.00
9.	ಬೆಳಗಾಂ	969	98,86,500.00

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ಸ್ಯಕ್ಷಾಮ

253 (309) ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಮೀನುಗಾರರು ಮತ್ಸ್ಯಕ್ಷಾಮ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ತೆಗೆದು ಕೊಳ್ಳಲಿರುವ ಕ್ರಮಗಳೇನು?

ಇ) ಮೀನುಗಾರಿಕೆ ಡೀಸೆಲ್ ಮೇಲಿನ ಮಾರಾಟ ತೆರಿಗೆ ರದ್ದು ಮಾಡುವುದು ಹಾಗೂ ನಾಡ ದೋಣಿಗಳಿಗೆ ತಿಂಗಳಿಗೆ ೪೦೦ ಲೀಟರ್‌ಸೀಮೆಎಣ್ಣೆ ಒದಗಿಸುವ ಉದ್ದೇಶ ಸರ್ಕಾರಕ್ಕಿದೆಯೆ?

ಈ) ಹಾಗಿದ್ದರೆ ಈ ಬಗ್ಗೆ ಸರ್ಕಾರವು ತೆಗೆದು ಕೊಂಡ ಕ್ರಮಗಳು ಯಾವವು.

ಶ್ರೀ ಜಯಪ್ರಕಾಶ್‌ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೀನುಗಾರರ ಸಾಲ ಮತ್ತು ಬಡ್ಡಿ ಮರುಪಾವತಿ ಮತ್ತು ಮುಂದೂಡಲು ಹಣಕಾಸಿನ ಸಂಸ್ಥೆಗಳನ್ನು ಕೋರಲಾಗಿದೆ.

ಇ) ಈ ವಿಷಯಗಳು ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಹೆಚ್ಚಿಸುವ ಬಗ್ಗೆ ಶೀಘ್ರದಲ್ಲಿಯೇ ಅಂತಿಮ ತೀರ್ಮಾನಕ್ಕೆಗೊಳ್ಳಲಾಗುವುದು.

ಅಧ್ಯಕ್ಷರು : ಮಂಡಿಸಲಾಯಿತು.

3. ಅರ್ಜಿಗಳನ್ನೊಪ್ಪಿಸುವುದು.

ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಅಧ್ಯಕ್ಷರೇ, ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವೈದ್ಯಕೀಯ ಮತ್ತು ತಾಂತ್ರಿಕ ಮಹಾ ವಿದ್ಯಾಲಯಗಳಿಗೆ ಸೇರಲು ವರಮಾನ ಹಾಗೂ ಜಾತಿ ಪ್ರಮಾಣ ಪತ್ರಗಳನ್ನು ವಿತರಣೆ ಮಾಡುವಲ್ಲಿ ಇರುವ ಗೊಂದಲದ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಯು. ಬಿ.ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ೧೯೮೮ರಿಂದ ೧೯೯೭ರವರೆಗೆ ಹಿರೇಕೆರೂರು ಪಟ್ಟಣದಲ್ಲಿ ಅಂಜುಮಾನ್ ಇಸ್ಲಾಂ ಕಮಿಟಿಗೆ ಸಂಬಂಧಿಸಿದಂತೆ ಜಮಾ ಖರ್ಚಿನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಹಾಗೂ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮತಿಘಟ್ಟದ ಶ್ರೀ ಜಯಭಾರತಿ ವಿದ್ಯಾಪೀಠ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರ ಹುದ್ದೆಗೆ ಅನುಮೋದನೆ ನೀಡುವ ಬಗೆಗಿನ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಸಾಬ್ರಕಟ್ಟೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸಿರುವ ಡಾ. ಕೆ. ಗಂಗಾಧರ ನಂಬಿಯಾರ್‌ಇವರ ಹುದ್ದೆಗೆ ವೇತನ ನಿಗದಿಪಡಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಬೇಕಾದ ೧೨ ಜನರ ಪೈಕಿ ೮ ಜನರು ಗೈರು ಹಾಜರಾಗಿದ್ದಾರೆ. ಅವರು ತಮ್ಮ ಗೈರು ಹಾಜರಿಗೆ ಕಾರಣವನ್ನೂ ಕೂಡ ನನಗೆ ತಿಳಿಸಿಲ್ಲ ಮತ್ತು ಅರ್ಜಿಗಳನ್ನು ಮಂಡಿಸಬೇಕೆಂದೂ ಸಹ ನನಗೆ ಹೇಳಿಲ್ಲ. ಈಗ ಶೂನ್ಯ ವೇಳೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : (ಅ) ಬೆಂಗಳೂರಿನ ಮಹಾಲೇಖಪಾಲಕರ ಕಛೇರಿಯಲ್ಲಿ ತಮಿಳು ಭಾಷೆ ಬಲ್ಲವರನ್ನು ಮರು ನೇಮಕಾತಿ ಮಾಡಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ನಿನ್ನೆಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಹಾಲೇಖಪಾಲಕರ ಕಛೇರಿಯಲ್ಲಿ ತಮಿಳರನ್ನು ನೇಮಕ ಮಾಡಿರುವ ಬಗ್ಗೆ ಕರ್ನಾಟಕ ರಾಜ್ಯಾದ್ಯಂತ ದೊಡ್ಡ ಹೋರಾಟ ನಡೆದಾಗ ಕೇಂದ್ರ ಸರ್ಕಾರವನ್ನು ನೇಮಕಾತಿ ಆದೇಶವನ್ನು ಹಿಂದಕ್ಕೆ ಪಡೆದಿತ್ತು. ಆದರೆ ಈಗ ಮತ್ತೊಮ್ಮೆ ಅದೇ ನೌಕರರನ್ನು ಆ ಕಛೇರಿಗೆ ಪುನ: ನೇಮಕಾತಿ ಮಾಡಲಾಗಿದೆ ಎಂದು ಮಾನ್ಯ ಪ್ರಧಾನ ಮಂತ್ರಿಗಳು ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀ ಕರುಣಾನಿಧಿಯವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಇದರಿಂದಾಗಿ ಬಹಳ ಗಂಭೀರವಾದಂತಹ ಪರಿಸ್ಥಿತಿ ಉದ್ಭವವಾಗುತ್ತಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟ